## ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕಚೇರಿಯ ಮಾಹಿತಿ.(31-03-2018)

## ಸಂಸ್ಥೆಯ ವಿವರ, ಕಾರ್ಯವ್ಯಾಪ್ತಿ ಮತ್ತು ಜವಾಬ್ದಾರಿಗಳು.

**ಕಾರ್ಯಾಲಯದ ಹೆಸರು: ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ಜಿಪಂ ) ಕುಮಟಾ ರವರ ಕಚೇರಿ.**
**ಕಾರ್ಯಾಲಯದ ವ್ಯಾಪ್ತಿ: ಕುಮಟಾ ತಾಲೂಕು.**
**ಕಾರ್ಯಾಲಯದ ಮುಖ್ಯಸ್ಥರು: ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ಜಿಪಂ ) ಕುಮಟಾ**

**ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ಜಿಲ್ಲಾ ಪಂಚಾಯತ್) ಕುಮಟಾ, ಉತ್ತರಕನ್ನಡ. ಇವರ ಕಚೇರಿಯ ಕಾರ್ಯಸಂಘಟನಾ ಪಟ್ಟಿ:**




ಅಧಿಕಾರಿ, ಸಿಬ್ಬಂದಿಗಳ ಕಾರ್ಯವ್ಯಾಪ್ತಿ ಹಾಗೂ ಜವಾಬ್ದಾರಿ

ತೋಟಗಾರರು.

ಕಚೇರಿಯ ಆವರಣದ ಉದ್ಯಾನವನವನ್ನು ಅಭಿವೃದ್ಧಿ ಪಡಿಸುವುದು, ಕಡತ ಮತ್ತು ಟಪಾಲುಗಳನ್ನು ಶಾಖೆಗಳಿಗೆ ತೆಗೆದುಕೊಂಡು ಹೋಗುವುದು, ಪತ್ರಗಳ ವಿತರಣೆ, ಅಂಚೆ ಕಚೇರಿಗೆ ಹೋಗಿಬರುವುದು, ಸರ್ಕಾರಿ ಸುತ್ತೋಲೆಗಳನ್ನು ಸಿಬ್ಬಂದಿಗಳಿಗೆ ವಿತರಿಸುವುದು, ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸುವುದು, ಮೇಲಧಿಕಾರಿಗಳ ಆದೇಶ ಪಾಲಿಸುವುದು, ಕೆಲಸದ ಅವಧಿಯಲ್ಲಿ ಕಡ್ಡಾಯವಾಗಿ ಸಮವಸ್ತ್ರ ಧರಿಸತಕ್ಕದ್ದು.

ತೋಟಗಾರಿಕೆ ಸಹಾಯಕರು:

ಸಹಾಯಕ ತೋಟಗಾರಿಕೆ ಅಧಿಕಾರಿರವರ ಎಲ್ಲ ಕೆಲಸಗಳಲ್ಲಿ ಸಹಕಾರ ನೀಡುವುದು, ಎಲ್ಲ ಯೋಜನೆಗಳ ಪರಿಕರಗಳನ್ನು ಫಲಾನುಭವಿಗಳಿಗೆ ವಿತರಿಸುವ ಕ್ರಮ ಕೈಗೊಳ್ಳುವುದು, ಮೇಲಧಿಕಾರಿಗಳ ಆದೇಶ ಪಾಲಿಸುವುದು.

ಸಹಾಯಕ ತೋಟಗಾರಿಕೆ ಅಧಿಕಾರಿ:

ರಾಜ್ಯವಲಯ, ಜಿಲ್ಲಾ ಪಂಚಾಯತ, ತಾಲೂಕ ಪಂಚಾಯತ ಹಾಗೂ ವಿಶೇಷ ಯೋಜನೆಗಳ ಕಡತಗಳ ನಿರ್ವಹಣೆ ಹಾಗೂ ಎಂಪಿಕ್ ಸಿದ್ಧಪಡಿಸುವುದು, ಎಲ್ಲ ಯೋಜನೆಗಳ ಮಾರ್ಗಸೂಚಿಗಳನ್ವಯ ಯೋಜನೆಗಳ ಅನುಷ್ಠಾನ ಕ್ರಮ ಕೈಗೊಳ್ಳುವುದು, ತಾಂತ್ರಿಕ ಮಂಜೂರಾತಿ ಕುರಿತು ಮೇಲಧಿಕಾರಿಗಳಿಗೆ ಪ್ರಸ್ಥಾವನೆ ಸಲ್ಲಿಸುವುದು, ಫಲಾನುಭವಿಗಳ ಪಟ್ಟಿ ತಯಾರಿಸಿ ಮೇಲಧಿಕಾರಿಗಳಿಗೆ ಸಲ್ಲಿಸುವುದು, ವಿಧಾನಸಭೆ / ಲೋಕಸಭೆ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮಾಹಿತಿ ತಯಾರಿಸಿ ಮಂಡಿಸುವುದು, ತೋಟಗಾರಿಕೆ ಬೆಳೆಗಳ ಮೌಲ್ಯಮಾಪನ ಕೆಲಸಗಳು, ಮಾಸಿಕ ಪ್ರಗತಿ ವರದಿ ತಯಾರಿಸುವುದು, ತೋಟಗಾರಿಕೆ ಬೆಳೆಗಳ ರೈತರ ತಾಕುಗಳ ಪರಿಶೀಲನೆ ಹಾಗೂ ತಾಂತ್ರಿಕ ಮಾಹಿತಿ ನೀಡುವುದು, ಪ್ರಕೃತಿ ವಿಕೋಪ ಪ್ರದೇಶಗಳಿಗೆ ಭೇಟಿ ನೀಡಿ ಅಗತ್ಯ ಮಾಹಿತಿ ತಯಾರಿಸುವುದು, ಹಾಗೂ ಪರೋಪಜೀವಗಳ ಪ್ರಯೋಗಶಾಲೆಯಲ್ಲಿ ಪರೋಪಜೀವಿಗಳನ್ನು ಅಭಿವೃದ್ಧಿಪಡಿಸುವುದು, ಎಲ್ಲ ಬಗೆಯ ಬಿಲ್ಲುಗಳನ್ನು ತಯಾರಿಸುವುದು, ಹಾಗೂ ಮೇಲಧಿಕಾರಿಗಳ ಆದೇಶ ಪಾಲಿಸುವುದು.

ಸಹಾಯಕ ತೋಟಗಾರಿಕೆ ಅಧಿಕಾರಿಗಳು –

ರೈತ ಸಂಪರ್ಕ ಕೇಂದ್ರ,. ಕುಮಟಾ,ಕೂಜಳ್ಳಿ,ಮಿರ್ಜಾನ,ಗೋಕರ್ಣ:-

ಆಯಾ ರೈತ ಸಂಪರ್ಕ ಕೇಂದ್ರಗಳು ಕೇಂದ್ರಸ್ಥಾನವಾಗಿರುತ್ತವೆ. ತಮ್ಮ ರೈತ ಸಂಪರ್ಕ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲ ಗ್ರಾಮ ಪಂಚಾಯತಗಳಲ್ಲಿ ಎಲ್ಲ ಯೋಜನೆಗಳ ಮಾರ್ಗಸೂಚಿಗಳನ್ವಯ ಯೋಜನೆಗಳ ಅನುಷ್ಠಾನ ಕ್ರಮ ಕೈಗೊಳ್ಳುವುದು, ತಾಂತ್ರಿಕ ಮಂಜೂರಾತಿ ಕುರಿತು ಮೇಲಧಿಕಾರಿಗಳಿಗೆ ಪ್ರಸ್ಥಾವನೆ ಸಲ್ಲಿಸುವುದು, ಫಲಾನುಭವಿಗಳ ಪಟ್ಟಿ ತಯಾರಿಸಿ ಮೇಲಧಿಕಾರಿಗಳಿಗೆ ಸಲ್ಲಿಸುವುದು, ಗ್ರಾಮಸಭೆಗಳಿಗೆ ಹಾಜರಾಗಿ ಯೋಜನೆಗಳ ಪ್ರಚಾರ ಕೈಗೊಳ್ಳುವುದು, ಫಲಾನುಭವಿಗಳನ್ನು ಗ್ರಾಮಸಭೆಯಲ್ಲಿ ಆಯ್ಕೆ ಮಾಡುವುದು. ತೋಟಗಾರಿಕೆ ಬೆಳೆಗಳ ರೈತರ ತಾಕುಗಳ ಪರಿಶೀಲನೆ ಹಾಗೂ ತಾಂತ್ರಿಕ ಮಾಹಿತಿ ನೀಡುವುದು ಹಾಗೂ ಮೇಲಧಿಕಾರಿಗಳ ಆದೇಶ ಪಾಲಿಸುವುದು.

ಅಧೀಕ್ಷಕರು:

ನಗದು ವಹಿ ನಿರ್ವಹಣೆ, ಎಲ್ಲ ಬಗೆಯ ಲೆಕ್ಕ ತಪಾಸಣೆ ವರದಿಗಳಿಗೆ ಅನುಸರಣ ಉತ್ತರ ನೀಡುವುದು,ಕಚೇರಿಯ ಎಲ್ಲ ಸಿಬ್ಬಂದಿಗಳ
ವೈಯಕ್ತಿಕ ಕಡತಗಳ ನಿರ್ವಹಣೆ,ಸೇವಾ ಪುಸ್ತಕಗಳ ನಿರ್ವಹಣೆ ಹಾಗೂ ಲೆಕ್ಕಪತ್ರ ವಿಭಾಗದ ಎಲ್ಲ ಕೆಲಸಗಳ ಮೇಲುಸ್ತುವಾರಿ ನಿರ್ವಹಿಸುವುದು
ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು.

ದ್ವಿತಿಯ ದರ್ಜೆ ಸಹಾಯಕ:

ಕಡತಗಳ ರಚನೆ, ವಿಷಯ ವಹಿ ರಚನ಼ ಕಡತಗಳ ಚಲನವಲನ, ಕಡತಗಳ ಕಾಯುವಿಕೆ, ಪತ್ರಗಳನ್ನು ಸ್ವೀಕರಿಸಿದ್ದಕ್ಕೆ ನಮೂದೀಕರಣ, ಕಡತ ಟಪಾಲುಗಳನ್ನು ಹಂಚುವುದು, ಕಡತಗಳ ರವಾನೆ, ಪ್ರತಿಗಳನ್ನು ಮಾಡುವುದು, ವೇತನ ಬಿಲ್ಲು, ಡಿ.ಸಿ. ಬಿಲ್ಲು, ಎ.ಸಿ. ಬಿಲ್ಲು, ಎನ್‌ಡಿಸಿ ಬಿಲ್ಲು, ಪ್ರವಾಸ ಭತ್ಯೆ ಬಿಲ್ಲು ತಯಾರಿಸುವುದು, ಸಂಬಂಧಪಟ್ಟ ವಹಿಗಳ ನಿರ್ವಹಣೆ, ಮಾಸಿಕ ಖರ್ಚು ಆದಾಯ ತಃಖ್ತೆ ತಯಾರಿಸುವುದು, , ಸಾದಿಲ್ವಾರು, ಇತರ ಬಿಲ್ಲುಗಳಿಗೆ ಮಂಜೂರಾತಿ ಕ್ರಮ ಕೈಗೊಳ್ಳುವುದು, ಸ್ಟ್ಯಾಂಪ್ ವಹಿ ನಿರ್ವಹಣೆ, ಜಿ.ಪಂ. & ತಾ.ಪಂ.ಗೆ ಸಂಬಂಧಿಸಿದ ತಾಲೂಕು ಮಟ್ಟದ ಬಿಲ್ಲುಗಳನ್ನು ಪರಿಶೀಲಿಸಿ ಮೇಲು ಸಹಿಗೆ ಮಂಡಿಸುವುದು, ಸದರಿ ಯೋಜನೆಗಳ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳುವುದು ಹಾಗೂ. ಮೇಲಧಿಕಾರಿಗಳ ಆದೇಶ ಪಾಲಿಸುವುದು.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು., ಜಿ.ಪಂ. ಕುಮಟಾ ರವರ ಕರ್ತವ್ಯ ಮತ್ತು ಜವಾಬ್ದಾರಿಗಳು:

- ಇಲಾಖೆಯ ತಾಲೂಕು ಮಟ್ಟದ ಪತ್ರಾಂಕಿತ ಅಧಿಕಾರಿಯ ಕರ್ತವ್ಯ ನಿರ್ವಹಣೆ.
- ತೋಟಗಾರಿಕೆ ಇಲಾಖೆಯ ಸಮಸ್ತ ಯೋಜನೆಗಳ ಅಭಿವೃದ್ಧಿ ವಿಸ್ತರಣೆ ಇತ್ಯಾದಿ ಕೆಲಸಗಳ ನಿರ್ವಹಣೆ.
- ಇಲಾಖೆಯ ಮಾರ್ಗಸೂಚಿ, ಅನುಮೋದಿತ ಎಂಪಿಕ್ ಕಾರ್ಯಕ್ರಮಗಳ ಪ್ರಕಾರ ಫಲಾನುಭವಿಗಳ ಆಯ್ಕೆ ಹಾಗೂ ಯೋಜನೆಗಳ ಪ್ರಗತಿ ನಿರ್ವಹಣೆ.
- ತೋಟಗಾರಿಕೆ ಚಟುವಟಿಕೆಗಳನ್ನು ಕಾಲಕ್ಕನುಸಾರ ಕೈಗೊಳ್ಳಲು ರೈತರಿಗೆ ಮಾರ್ಗದರ್ಶನ ನೀಡುವುದು, ಕಚೇರಿ ಸಿಬ್ಬಂದಿಗಳ ಪ್ರಗತಿ ಪರಿಶೀಲನೆ, ರೈತರು/ ಜನಪ್ರತಿನಿದಿಗಳೊಂದಿಗೆ ಕಲೆತು ರೈತರ ಸಮಸ್ಯೆಗಳಿಗೆ ಸ್ಪಂದಿಸುವುದರೊಂದಿಗೆ ಮಾರ್ಗೋಪಾಯ ಸೂಚಿಸುವುದು.
- ತಾಲೂಕು ಮಟ್ಟದ ಎಲ್ಲಾ ಅಧಿಕೃತ ಸಭೆ ಸಮಾರಂಭಗಳಿಗೆ ಹಾಜರಾಗುವುದು.
- ಕಚೇರಿಯಲ್ಲಿ ಪರಿಕರಗಳ ಖರೀದಿ, ಹಣಕಾಸು ವ್ಯವಸ್ಥೆ, ಪತ್ರ ವ್ಯವಹಾರ ಇತ್ಯಾದಿಗಳ ಪರಮೋಚ್ಚ ಅಧಿಕಾರ ಹೊಂದಿರುತ್ತಾರೆ.
- ಮೇಲಧಿಕಾರಿಗಳು ನೀಡುವ ಆದೇಶ ಮತ್ತು ಸೂಚನೆಗಳನ್ನು ಪರಿಪಾಲಿಸುವುದು.

ಅಧಿಕಾರಿ/ ನೌಕರರ ಅಧಿಕಾರ ಮತ್ತು ಕರ್ತವ್ಯಗಳು :

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು:

ತಾಲೂಕ ಮಟ್ಟದ ಇಲಾಖೆಯ ಕಾರ್ಯನಿರ್ವಹಣಾ ಅಧಿಕಾರಿಯಾಗಿರುತ್ತಾರೆ. ತೋಟಗಾರಿಕೆಯ ಸಮಸ್ತ ಯೋಜನೆಗಳ ತೋಟಗಾರಿಕೆ ಚಟುವಟಿಕೆ ಅಭಿವೃದ್ಧಿ ಹಾಗೂ ವಿಸ್ತರಣೆಯ ಜವಾಬ್ದಾರಿ ಹೊಂದಿರುತ್ತಾರೆ. ಇಲಾಖೆಯ ಮಾರ್ಗಸೂಚಿ ಹಾಗೂ ಅನುಮೋದಿತ ಎಮ್ ಪಿಕ್ ಪ್ರಕಾರ ತಾಲೂಕಿನಲ್ಲಿ ವಿವಿಧ ಯೋಜನೆಗಳ ಕೆಲಸ ಕೈಗೊಳ್ಳುವುದು, ತೋಟಗಾರಿಕೆ ಚಟುವಟಿಕೆಗಳನ್ನು ಕಾಲಕ್ಕೆ ಅನುಸಾರವಾಗಿ ಕೈಗೊಳ್ಳಲು ರೈತರಿಗೆ ಮಾಹಿತಿ ನೀಡುವುದು, ಕಚೇರಿಯ ಅಧೀನ ಸಿಬ್ಬಂದಿ ಕಚೇರಿಯಲ್ಲಿ / ಸಾರ್ವಜನಿಕರೊಂದಿಗೆ ಗೌರವಯುತವಾಗಿ ಸಮಯೋಚಿತ ಕೆಲಸ ನಿರ್ವಹಿಸುತ್ತಾರೆಯೇ ಎನ್ನುವ ಬಗ್ಗೆ ನಿಗಾ ವಹಿಸುತ್ತಾರೆ. ತಾಲೂಕಾ ವ್ಯಾಪ್ತಿಗೆ ಒಳಪಡುವ ತೋಟಗಾರಿಕೆ ಚಟುವಟಿಕೆ ಅಭಿವೃದ್ಧಿ, ವಿಸ್ತರಣೆ, ಸಸ್ಯ ಸಂರಕ್ಷಣೆ ಇತ್ಯಾದಿ ಕುರಿತು ರೈತರ ತೋಟಕ್ಕೆ ಭೇಟಿ ನೀಡುವುದು, ಫಲಾನುಭವಿಗಳನ್ನು ಆಯ್ಕೆ ಮಾಡುವುದು, ಜನಪ್ರತಿನಿಧಿಗಳೊಂದಿಗೆ ಉತ್ತಮ ಸಂಬಂಧ ಹೊಂದುವುದರೊಂದಿಗೆ ರೈತರ ಸಮಸ್ಯೆಗಳಿಗೆ ಸ್ಪಂದಿಸಿ ಮಾರ್ಗೋಪಾಯ ಸೂಚಿಸುವ ಹೊಣೆ ಹೊಂದಿರುತ್ತಾರೆ. ತಾಲೂಕು ಮಟ್ಟದ ಎಲ್ಲ ಸಭೆಗಳಿಗೆ ಖುದ್ದಾಗಿ ಹಾಜರಾಗುವುದು, ಅದೀನ ಸಿಬ್ಬಂದಿಗಳಿಗೆ ವಹಿಸಿರುವ ಕೆಲಸಗಳ ಪ್ರಗತಿ ಪರಿಶೀಲನೆ, ಪರಿಕರಗಳ ಖರೀದಿ, ದಾಸ್ತಾನು ವಿತರಣೆ ಹಾಗೂ ಎಲ್ಲ ಬಗೆಯ ಲೆಕ್ಕ ತಪಾಸಣೆ ವರದಿಗಳಿಗೆ ಅನುಸರಣ ವರದಿ ಸಲ್ಲಿಸುವುದು, ಹಣಕಾಸು ವ್ಯವಸ್ಥೆ, ಇತ್ಯಾದಿಗಳ ಸಮಸ್ತ ಜವಾಬ್ದಾರಿ ಹೊಂದಿರುತ್ತಾರೆ. ಪರೋಪಜೀವಿ ಪ್ರಯೊಗಶಾಲೆಯಲ್ಲಿ ಪರೋಪಜೀವಿಗಳನ್ನು ಅಭಿವೃದ್ಧಿಪಡಿಸುವ ಜವಾಬ್ದಾರಿ ಹೊಂದಿರುತ್ತಾರೆ. ಹಾಗೂ ಮೇಲಧಿಕಾರಿಗಳ ಆದೇಶ ಪಾಲಿಸುವುದು.

ನಿರ್ಣಯ ತೆಗೆದುಕೊಳ್ಳುವಂತಹ ಪ್ರಸ್ಥಾವನೆಗಳಲ್ಲಿ ಪಾಲಿಸಬೇಕಾದ ಕ್ರಮ, ಮೇಲ್ವಿಚಾರಣೆ ಚಾನಲ್ ಗಳ ಮತ್ತು ಅಕೌಂಟಬಲಿಟಿ ಸೇರಿದಂತೆ :

ತೋಟಗಾರಿಕೆ ಸಹಾಯಕರು :

ಸಹಾಯಕ ತೋಟಗಾರಿಕೆ ಅಧಿಕಾರಿರವರ ಎಲ್ಲ ಕೆಲಸಗಳಲ್ಲಿ ಸಹಕಾರ ನೀಡುವುದು, ಎಲ್ಲ ಯೋಜನೆಗಳ ಪರಿಕರಗಳನ್ನು ಫಲಾನುಭವಿಗಳಿಗೆ ನೀಡಿರುವ ಬಗ್ಗೆ ದಾಖಲೆಗಳನ್ನು ಸಿದ್ಧಪಡಿಸುವುದು, ಮೇಲಧಿಕಾರಿಗಳ ಆದೇಶ ಪಾಲಿಸುವುದು.

ದ್ವಿತಿಯ ದರ್ಜೆ ಸಹಾಯಕ:

ತಾವು ಸ್ವೀಕರಿಸಿರುವ ಪತ್ರಗಳ ಸಂಬಂಧ ನಿಯಮಗಳು, ಸರ್ಕಾರಿ ಆದೇಶಗಳು , ಸುತ್ತೋಲೆಗಳು ಇತ್ಯಾದಿ ಸೂಚನೆಗಳನ್ನು ಗಮನಿಸಿ, ಮುಂದಿನ ಆದೇಶಕ್ಕಾಗಿ ಕಡತ ಬಿಲ್ಲುಗಳನ್ನು , ಆದೇಶಗಳನ್ನು ಇತ್ಯಾದಿಗಳನ್ನು ವಿಳಂಬ ಮಾಡದೇ ಮಂಡಿಸುವುದು.

ಅಧೀಕ್ಷಕ:

ದ್ವಿತಿಯ ದರ್ಜೆ ಸಹಾಯಕರಿಗೆ ಕಾಲಕಾಲಕ್ಕೆ ನಿರ್ವಹಿಸುವ ಎಲ್ಲಾ ಕೆಲಸಗಳಿಗೆ ಸಲಹೆ ಸೂಚನೆಗಳನ್ನು ನೀಡುವುದು ಹಾಗೂ ನಿರ್ವಹಿಸಿದ ಎಲ್ಲಾ ಕೆಲಸಗಳ ಮೆಲ್ವಿಚಾರಣೆ ಮಾಡುವುದು ಕಚೇರಿಯ ಶಿಸ್ತು,ಸಮಯ ಪಾಲನೆಗಳ ಬಗ್ಗೆ ಹೆಚ್ಚಿನ ಗಮನ ನೀಡುವುದು. ಲೆಕ್ಕ ತಪಾಸಣಾವರದಿಗಳಿಗೆ ವಿಳಂಬವಿಲ್ಲದೇ ಅನುಸರಣಾವರದಿ ಸಲ್ಲಿಸುವುದು.

ಸಹಾಯಕ ತೋಟಗಾರಿಕೆ ಅಧಿಕಾರಿ:

ಅವರವರ ಹೋಬಳಿಗೆ ಸಂಬಂಧಿಸಿದ ಎಲ್ಲ ಯೋಜನೆಗಳ ಕಡತ ನಿರ್ವಹಣೆ, ಎಂಪಿಕ್, ಮಾರ್ಗಸೂಚಿಗಳ ಪ್ರಕಾರ ಯೋಜನೆಗಳನ್ನು ಅನುಷ್ಠಾನಗೊಳಿಸುವುದು. ಪ್ರಗತಿ ವರದಿ ತಯಾರಿಕೆ, ಫಲಾನುಭವಿಗಳ ತಾಕು ಪರಿಶೀಲನೆ ಹಾಗೂ ತಾಂತ್ರಿಕ ಸಲಹೆ ಖರೀದಿಸಿರುವ ಎಲ್ಲ ಪರಿಕರಗಳ ದಾಸ್ತಾನು ಹಾಗೂ ಅವುಗಳ ನಿರ್ವಹಣೆ ಹಾಗೂ ಮೇಲಧಿಕಾರಿಗಳ ಆದೇಶ ಪಾಲಿಸುವುದು.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು:

ಪ್ರಸ್ಥಾವನೆಗಳ ಕುರಿತು ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ತೀರ್ಮಾನಿಸುವುದು, ತಮ್ಮ ಹುದ್ದೆಗೆ ನೀಡಿರುವ ಅಧಿಕಾರ ವ್ಯಾಪ್ತಿಯೊಳಗೆ ಅನುಮೋದಿಸಿ ಮಂಜೂರಾತಿ ನೀಡುವುದು, ಅಗತ್ಯ ಸಂದರ್ಭದಲ್ಲಿ
ತೋಟಗಾರಿಕೆ ಉಪನಿರ್ದೇಶಕರಿಗೆ ಶಿಫಾರಸು ಮಾಡುವುದು ಹಾಗೂ ಮೇಲಧಿಕಾರಿಗಳ ಆದೇಶ ಪಾಲಿಸುವುದು.

ಕೆಲಸ ಕಾರ್ಯಗಳನ್ನು ನಿರ್ವಹಿಸಲು ನಿಗದಿಪಡಿಸಲಾದ ವಿಧಾನಗಳು, ಕಟ್ಟುಪಾಡುಗಳು

ತೋಟಗಾರರು:

ಮೇಲಾಧಿಕಾರಿಗಳು ವಹಿಸಿದ ಕೆಲಸಗಳನ್ನು ಅದೇ ದಿನ ನಿರ್ವಹಿಸುವುದು.

.

ತೋಟಗಾರಿಕೆ ಸಹಾಯಕರು:

ಸಹಾಯಕ ತೋಟಗಾರಿಕೆ ಅಧಿಕಾರಿಗಳ ಎಲ್ಲಾ ಕೆಲಸಗಳಲ್ಲಿ ಸಹಕರಿಸಿ ನಿಗಧಿಪಡಿಸಿರುವ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸುವುದು.

ಸಹಾಯಕ ತೋಟಗಾರಿಕೆ ಅಧಿಕಾರಿ:

ತಾಲೂಕಿಗೆ ಸಂಬಂಧಿಸಿದ ಎಲ್ಲಾಯೋಜನೆಗಳನ್ನು ಎಂ.ಎಂ.ಆರ್ ಹಾಗೂ ಎಲಾಖೆ ಮಾರ್ಗಸೂಚಿ ಪ್ರಕಾರ ನಿಗಧಿತ ಅವಧಿಯೊಳಗೆ ಅನುಷ್ಠಾನಗೊಳಿಸುವುದು ಹಾಗೂ ಮೇಲಧಿಕಾರಿಗಳ ಆದೇಶ ಪಾಲಿಸುವುದು.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು :

ಮಂಡಿಸಲಾದ ಎಲ್ಲಾ ಕಡತ, ಬಿಲ್ಲು, ವಹಿಗಳ ಕುರಿತು ಸೂಕ್ತ ನಿರ್ಧಾರ ಕೈಗೊಳ್ಳುವುದು, ತಮ್ಮ ಅಧಿಕಾರ ವ್ಯಾಪ್ತಿ ಮೀರಿದ ಸಂದರ್ಭಗಳಲ್ಲಿ ತೋಟಗಾರಿಕೆ ಉಪನಿರ್ದೇಶಕರವರಿಗೆ ಪ್ರಸ್ತಾವನೆ ಸಲ್ಲಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು.

## ನೌಕರರು ಅವರವರ ಕರ್ತವ್ಯಗಳನ್ನು ನಿರ್ವಹಿಸಲಾದ/ಉಪಯೋಗಿಸುವ/ನಿಯಂತ್ರಣದಲ್ಲಿಟ್ಟುಕೊಂಡಿರುವ ನಿಯಮಗಳು/ಸೂಚನೆಗಳು/ಕೈಪಿಡಿಗಳು/ ದಾಖಲೆಗಳು ಮತ್ತು ನಿಬಂದನೆಗಳು.

1.ಕರ್ನಾಟಕ ನಾಗರೀಕ ಸೇವಾ ನಿಯಮಗಳು.
2.ಕರ್ನಾಟಕ ಆರ್ಥಿಕ ಸಂಹಿತೆ
3, ಕಛೇರಿ ಕೈ ಪಿಡಿ.
4. ವೃಂದ ಮತ್ತು ನೇಮಕಾತಿ ನಿಯಮಗಳು
5. ಆಯವ್ಯಯ ಕೈ ಪಿಡಿ
6. ಕರ್ನಾಟಕ ಖಜಾನೆ ಸಂಹಿತೆ
7. ಸಾದಿಲ್ವಾರು ವೆಚ್ಚದ ಕೈ ಪಿಡಿ
8. ಕರ್ನಾಟಕ ನಾಗರೀಕ ಸೇವಾ ನಡತೆ ನಿಯಮ
9. ಇಲಾಖೆ ಮತ್ತು ಆರ್ಥಿಕ ಎಲಾಖೆ ಹೊರಡಿಸಿದ ಡೆಲಿಗೇಷನ್ ಆಫ್ ಪಾವರ್ಸ
10, ಸರಕಾರದ ಆಧಿಸೂಚನೆಗಳು ಸುತ್ತೋಲೆಗಳು) ಇತ್ಯಾದಿ

ಕಡತ ಶೀರ್ಷಿಕೆ

| ಅ.ಸಂ. | ಕಡತದ ಶಾಖೆ | | ದಾಖಲಾತಿಗಳ ಉಲ್ಲೇಖ |
|---|---|---|---|
| 1. | ಸಿಬ್ಬಂದಿ | ಇಎಸ ಟಿ | ತೋಟಗಾರಿಕೆ ಇಲಾಖೆಯ ಸಿಬ್ಬಂದಿ ಮತ್ತು ಅಧಿಕಾರಿಗಳ ಶಿಸ್ತು, ನಡತೆ, ಲೆಕ್ಕಪತ್ರ ಮತ್ತು ಇತರ ವಿಷಯಗಳು |
| 2. | ಲೆಕ್ಕಪತ್ರ | ಆಡಿಟ್ | ಲೆಕ್ಕ ತಪಾಸಣೆಗೆ ಸಂಬಂಧಿಸಿದ ಕಡತಗಳು |
| 3. | ಶ್ರೀ ಹೆಚ್.ಎಲ್.ಪಟಗಾರ. | ಎ ಹೆಚ್ಒ | ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದ ಎಲ್ಲಾ ಪತ್ರಗಳು, ಪರಿಕರಗಳು, ಬಿಲ್ಲುಗಳು ಇತ್ಯಾದಿ ನಿರ್ವಹಣೆ |

## ಪಾಲಿಸಿಗಳನ್ನು ಮಾಡುವಾಗ ಅಥವಾ ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಇರುವ ಏರ್ಪಾಡುಗಳು, ಸಾರ್ವಜನಿಕ ಸದಸ್ಯರುಗಳ ಸಹಭಾಗಿತ್ವ ಮುಂತಾದ ವಿವರಗಳು.

ಇಲಾಖೆ ಮಾರ್ಗಸ್ರಚಿ/ ಎಂಎಂಆರ್ ಕಾರ್ಯಕ್ರಮಗಳ ಪ್ರಕಾರ ತಾಲೂಕು ಮಟ್ಟದಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದು, ಕಾರ್ಯಮಿತಿಗೊಳಪಟ್ಟು ಸಾರ್ವಜನಿಕ್ಕರಿಂದ ಬಂದ ಅರ್ಜಿಗಳ ಕುರಿತು ಕ್ರಮ ಕೈಗೊಳ್ಳುವುದು.

ಈ ಇಲಾಖೆಯಿಂದ ರಚಿಸಲ್ಪಡುವ ಅಥವಾ ಸಲಹೆಗಳನ್ನು ಪಡೆಯುವ ಸಲುವಾಗಿ ಯಾವುದೇ ಸಮಿತಿಗಳಿರುವುದಿಲ್ಲ. ಮಾಹಿತಿ ಅಧಿನಿಯಮದ ಪ್ರಕಾರ ಮಾಹಿತಿಗಳನ್ನು ಪಡೆಯಬಹುದು.

ಸಂಸ್ಥೆಯು ತನ್ನ ಅಧೀನದಲ್ಲಿ ಹೊಂದಿರುವ ದಾಖಲಾತಿಗಳ ವರ್ಗೀಕರಣ ವಿವರಗಳು

1. ತಾಂತ್ರಿಕ ಶಾಖೆ:

1. ಪ್ರಗತಿಯ ವರದಿಗಳು.
2. ಎಂ.ಎಂ.ಆರ್. ಪ್ರತಿಗಳು.
3. ದಾಸ್ತಾನು ಹಾಗೂ ವಿತರಣಾ ವಹಿಗಳು
4. ಎಲ್ಲ ಯೋಜನೆಗಳ ಮಂಜೂರಾತಿಗೆ ಸಂಬಂಧಿಸಿದಂತೆ ಅರ್ಜಿ ಪಹಣಿ ಇತ್ಯಾದಿ.
5. ಪ್ರಯೋಗಶಾಲೆಗೆ ಸಂಬಂಧಿಸಿದಂತೆ ಗೋನಿಯೋಜಸ ಪರೋಪಜೀವಿ ಉತ್ಪಾದನೆ ಮತ್ತು ವಿತರಣೆ.

2. ಆಡಳಿತ ಶಾಖೆ:

1. ಹಾಜರಾತಿ ವಹಿ
2. ಪತ್ರಾಂಕಿತರಲ್ಲದ ಅಧಿಕಾರಿಗಳ ಸಾಂದರ್ಭಿಕ ರಜೆ ಕಡತ.
3. ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿ ಹುದ್ದೆಗಳ ತಃಖ್ತೆ.
4. ಕಚೇರಿ ಆದೇಶದ ಪುಸ್ತಕ.
5. ರವಾನೆ ರಿಜಿಸ್ಟರ್.
6. ಸ್ವೀಕೃತಿ ವಹಿ.
7. ಮುದ್ದಾಂ ವಹಿ.
8. ರಹಸ್ಯ ವರದಿಗಳ ಕಡತ.
9. ಆಸ್ತಿ ಮತ್ತು ದಾಯಿತ್ವ ವಹಿ.
10. ಸೇವಾಪುಸ್ತಕ, ನಿಗಾವಹಿಯೊಂದಿಗೆ.
11. ಅಧಿಕಾರಿ / ಸಿಬ್ಬಂದಿಗಳ ವೈಯುಕ್ತಿಕ ವಹಿ.
12. ಸ್ಟಾಂಪ ವಹಿ.
13. ನಗದು ಪುಸ್ತಕ (ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ, ರಾಜ್ಯವಲಯ ಯೋಜನೆ, ಜಿಲ್ಲಾವಲಯ ಯೋಜನೆ, ತಾಲೂಕ ಪಂಚಾಯತ ಯೋಜನೆ ಪ್ರತ್ಯೇಕ).
14. ವೇತನ ಬಟವಾಡೆ ವಹಿ.
15. ಪ್ರಯಾಣ ಭತ್ಯೆ ಬಟವಾಡೆ ವಹಿ.
16. ಅನುದಾನ ಬಿಡುಗಡೆ ನಿಗಾವಹಿ ಮತ್ತು ಸಾದಿಲ್ವಾರು ಬಿಲ್ ರಿಜಿಸ್ಟರ್.
17. ಖರ್ಚು ತಃಖ್ತೆ ರಿಜಿಸ್ಟರ್ (ಜಿ.ಪಂ. ರಾವ. ತಾಪಂ. ಪ್ರತ್ಯೇಕ )
18. ಟೋಕನ್ ವಹಿ.
19. ರೆಮಿಟನ್ಸ ರಿಜಿಸ್ಟರ್.
20. ಚೆಕ್ ಸ್ವೀಕೃತಿ ವಹಿ.
21. ಡೆಡ್ ಸ್ಟಾಕ ರಿಜಿಸ್ಟರ್.
22. ಪೀಠೋಪಕರಣ ರಿಜಿಸ್ಟರ್.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ಜಿಪಂ ) ಕುಮಟಾ ಕಚೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರ ದೂರವಾಣಿ ವಿವರ:

| ಕ್ರ.ಸಂ. | ಹುದ್ದೆ | ಹೆಸರು | ದೂರವಾಣಿ ಸಂಖ್ಯೆ |
|---|---|---|---|
| 1 | ತೋಟಗಾರ | –ತೆರವು ಹುದ್ದೆ – | – |
| 2 | ತೋಟಗಾರ | ಶ್ರೀ ರಾಜು.ಬಿ.ನಾಯ್ಕ | 223856 |
| 3. | ತೋಟಗಾರ | ಶ್ರೀ ಕೇಶವ ಡಿ.ನಾಯ್ಕ | 223856 |
| 4. | ತೋಟಗಾರಿಕೆ ಸಹಾಯಕರು | ಶ್ರೀ ಪ್ರವೀಣ.ಎಂ.ನಾಯ್ಕ | 223856 |
| 5. | ತೋಟಗಾರಿಕೆ ಸಹಾ್ಯಕರು | ಶ್ರೀ ಚಂದ್ರು.ಪಟಗಾರ | 223856 |
| 6. | ತೋಟಗಾರಿಕೆ ಸಹಾಯಕರು | ಶ್ರೀ ವಿನೋದ.ಮಿಡ್ಲಗಜನಿ | 223856 |
| 7. | ತೋಟಗಾರಿಕೆ ಸಹಾಯಕರು | ಶ್ರೀಮತಿ ಮುಕ್ತಾ ನಾಯ್ಕ | 223856 |
| 8. | ಸಹಾಯಕ ತೋಟಗಾರಿಕೆ ಅಧಿಕಾರಿ ರೈ.ಸಂ.ಕೇ.ಕುಮಟಾ | ಶ್ರೀ ಹಾಲಪ್ಪ.ಎಲ್.ಪಟಗಾರ | 223856 |
| 9. | ಸಹಾಯಕ ತೋಟಗಾರಿಕೆ ಅಧಿಕಾರಿ ರೈ.ಸಂ.ಕೇ.ಕೂಜಳ್ಳಿ | ಶ್ರೀ ಚೇತನ ಜಿ.ನಾಯ್ಕ | 223856 |
| 10. | ಅಧೀಕ್ಷಕ | ಶ್ರೀಮತಿ ಸುವಾಸಿನಿದೇವಿ ಆರ್. ಯಾಜಿ. | 223856 |
| 11. | ದ್ವಿತಿಯ ದರ್ಜೆ ಸಹಾಯಕ: | –ತೆರವು ಹುದ್ದೆ – | 223856 |
| 12. | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು | ಶ್ರೀ ಕೆ.ಪಿ ಚಿದಂಬರ | 223856 |

ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದ ವಿವರ

| ಅ.ಸಂ. | ಹುದ್ದೆ | ಹೆಸರು |
|---|---|---|
| 1 | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು | ಶ್ರೀ ಕೆ.ಪಿ ಚಿದಂಬರ |
| 2 | ಸಹಾಯಕ ತೋಟಗಾರಿಕೆ ಅಧಿಕಾರಿ, ಹಿಸತೋನಿ ಕಚೇರಿ, ಕುಮಟಾ(ತಾಂತ್ರಿಕ ಸಹಾಯಕ) | ––ತೆರವು ಇದೆ.–– |
| 3 | ಸಹಾಯಕ ತೋಟಗಾರಿಕೆ ಅಧಿಕಾರಿ, ರೈತ ಸಂಪರ್ಕಕೇಂದ್ರ, ಕುಮಟಾ | ಶ್ರೀ ಹಾಲಪ್ಪ.ಎಲ್.ಪಟಗಾರ |
| 4 | ಸಹಾಯಕ ತೋಟಗಾರಿಕೆ ಅಧಿಕಾರಿ, ರೈತ ಸಂಪರ್ಕಕೇಂದ್ರ, ಮಿರ್ಜಾನ | ಶ್ರೀ ಚೇತನ ಜಿ.ನಾಯ್ಕ |
| 5 | ಸಹಾಯಕ ತೋಟಗಾರಿಕೆ ಅಧಿಕಾರಿ, ರೈತ ಸಂಪರ್ಕಕೇಂದ್ರ, ಗೋಕರ್ಣ | ––ತೆರವು ಇದೆ.–– |
| 6. | ಸಹಾಯಕ ತೋಟಗಾರಿಕೆ ಅಧಿಕಾರಿ, ರೈತ ಸಂಪರ್ಕಕೇಂದ್ರ, ಕೂಜಳ್ಳಿ | ––ತೆರವು ಇದೆ.–– |
| 7. | ತೋಟಗಾರಿಕೆ ಸಹಾಯಕ–1 | ಶ್ರೀಮತಿ ಮುಕ್ತಾ ನಾಯ್ಕ |
| 8 | ತೋಟಗಾರಿಕೆ ಸಹಾಯಕ–2 | ಶ್ರೀ ಪ್ರವೀಣ.ಎಂ. ನಾಯ್ಕ. |
| 9. | ತೋಟಗಾರಿಕೆ ಸಹಾಯಕ–3 | ಶ್ರೀ ಚಂದ್ರು.ಪಟಗಾರ |
| 10. | ತೋಟಗಾರಿಕೆ ಸಹಾಯಕ–4 | ಶ್ರೀ ವಿನೋದ.ಮಿಡ್ಲಗಜನಿ |
| 11. | ತೋಟಗಾರ | ––ತೆರವು ಇದೆ. ––– |
| 12 | ತೋಟಗಾರ | ಶ್ರೀ ಕೇಶವ ಡಿ.ನಾಯ್ಕ |
| 13. | ತೋಟಗಾರ | ಶ್ರೀ ರಾಜು.ಬಿ.ನಾಯ್ಕ. |
| 14 | ಅಧೀಕ್ಷಕರು. | ಸುವಾಸಿನಿದೇವಿ ಆರ್. ಯಾಜಿ. |
| 15 | ದ್ವಿತಿಯ ದರ್ಜೆ ಸಹಾಯಕ | ––ತೆರವು ಇದೆ.–– |

### ಅಧಿಕಾರಿ / ಸಿಬ್ಬಂದಿಗಳ ಮಾಸಿಕ ವೇತನದ ವಿವರಗಳು.

| ಅ.ಸಂ. | ಹುದ್ದೆ | ಹೆಸರು | ವೇತನ ಶ್ರೇಣಿ | ಮೂಲವೇತನ |
|---|---|---|---|---|
| 1 | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು | ಶ್ರೀ ಕೆ.ಪಿ ಚಿದಂಬರ | 28100-50100 | 50100 |
| 2 | ಸಹಾಯಕ ತೋಟಗಾರಿಕೆ ಅಧಿಕಾರಿ, ಹಿಸತೋನಿ ಕಚೇರಿ, ಕುಮಟಾ(ತಾ.ಸ) | - ತೆರವು - | 216000-40050 | - |
| 3 | ಸಹಾಯಕ ತೋಟಗಾರಿಕೆ ಅಧಿಕಾರಿ, ರೈತ ಸಂಪರ್ಕಕೇಂದ್ರ, ಕುಮಟಾ | ಹಾಲಪ್ಪ.ಎಲ್.ಪಟಗಾರ | 21600-40050 | 26000 |
| 4 | ಸಹಾಯಕ ತೋಟಗಾರಿಕೆ ಅಧಿಕಾರಿ, ರೈತ ಸಂಪರ್ಕಕೇಂದ್ರ, ಮಿರ್ಜಾನ | ಶ್ರೀ ಚೇತನ ಜಿ.ನಾಯ್ಕ | 21600-40050 | 253<br>26000 |
| 5 | ಸಹಾಯಕ ತೋಟಗಾರಿಕೆ ಅಧಿಕಾರಿ, ರೈತ ಸಂಪರ್ಕಕೇಂದ್ರ, ಗೋಕರ್ಣ | -ತೆರವು - | 21600-40050 | - |
| 6. | ಸಹಾಯಕ ತೋಟಗಾರಿಕೆ ಅಧಿಕಾರಿ, ರೈತ ಸಂಪರ್ಕಕೇಂದ್ರ, ಕೂಜಳ್ಳಿ | -ತೆರವು - | 21600-40050 | - |
| 7 | ತೋಟಗಾರಿಕೆ ಸಹಾಯಕ-೧ | ಶ್ರೀಮತಿ ಮುಕ್ತಾ ನಾಯ್ಕ | 12500-24000 | 14200 |
| 8 | ತೋಟಗಾರಿಕೆ ಸಹಾಯಕ-2 | ಶ್ರೀ ಪ್ರವೀಣ.ಎಂ. | 12500-24000 | 14200 |
| 9 | ತೋಟಗಾರಿಕೆ ಸಹಾಯಕ-3 | ಶ್ರೀ ಚಂದ್ರು ಪಟಗಾರ | 12500-24000 | 13900 |
| 10 | ತೋಟಗಾರಿಕೆ ಸಹಾಯಕ-4 | ಶ್ರೀ ವಿನೋದ.ಮಿಡ್ಲಗಜನಿ | 12500-24000 | 14200 |
| 11 | ತೋಟಗಾರ | --- ತೆರವು --- | 11000-19000 | - |
| 12. | ತೋಟಗಾರ | ಶ್ರೀ ರಾಜು.ಬಿ.ನಾಯ್ಕ. | 11000-19000 | 18550 |
| 13. | ತೋಟಗಾರ | ಶ್ರೀ ಕೇಶವ ಡಿ.ನಾಯ್ಕ | 9600-14550 | 14550 |
| 14. | ಅಧೀಕ್ಷಕ. | ಶ್ರೀಮತಿ ಸುವಾಸಿನಿದೇವಿ ಆರ್.ಯಾಜಿ | 20000-36300 | 26700 |
| 15. | ದ್ವಿತೀಯ ದರ್ಜೆ ಸಹಾಯಕ | --- ತೆರವು --- | 11600-21000 | - |

## 2017-18 ರಾಜ್ಯವಲಯ, ಜಿಲ್ಲಾ ವಲಯ 31-03-2018 ಅಂತ್ಯಕ್ಕೆ ಪ್ರಗತಿ ವರದಿ.

ತಾಲೂಕು: ಕುಮಟಾ

| ಕ್ರ.ಸಂ | ಕಾರ್ಯಕ್ರಮ | ಘಟಕ ವೆಚ್ಚ | ವಾರ್ಷಿಕ ಗುರಿ | | | ಬಿಡುಗಡೆ | ಸಾಧನೆ | | |
|---|---|---|---|---|---|---|---|---|---|
| | | | ಆರ್ಥಿಕ | ಭೌತಿಕ | ಫ.ಸಂ | ಅನುದಾನ | ಆರ್ಥಿಕ | ಭೌತಿಕ | ಫ.ಸಂ |
| 1 | ಹನಿ ನೀರಾವರಿ (PMKSY)(S04) | | 100000 | 1.6 | | - | - | - | - |
| 2 | **ತೆಂಗಿನಲ್ಲಿ ಸಂಯೋಜಿತ ಬೇಸಾಯ ಯೋಜನೆ** | | | | | | | | |
| | 1. 2016-17ನೇ ಸಾಲಿನ ಪ್ರಾತ್ಯಕ್ಷಿಕೆಗಳ ನಿರ್ವಹಣೆ | 17500/ಹೆ. | 175000 | 10 | 21 | 175000 | 174980 | - | 21 |
| | 2.ತೆಂಗು ಪುನರ್ನಾಟಿ ಮತ್ತು ಪುನಶ್ಚೇತನ | 44750/ಹೆ. | 89500 | 2 | | 89500 | 89500 | 2 | 4 |
| | 3.ತೆಂಗು ಪ್ರದೇಶ ವಿಸ್ತರಣೆ(25%) | 7500/ಹೆ. | 7500 | 1 | | 7500 | 6500 | 2 | 2 |
| | 4. ತೆಂಗು ಬೆಳೆಗೆ ತಗಲುವ ಕೀಟ ಮತ್ತು ರೋಗ ನಿರ್ವಹಣೆ | 5250/ಹೆ. | 105000 | 20 | | 105000 | 104999 | 20 | 34 |
| | 5. ಸಾದಿಲ್ವಾರು | | 10000 | | | 10000 | 9100 | - | - |
| | **ಒಟ್ಟೂ** | | **387000** | **34.6** | | **387000** | **385079** | **24** | **61** |
| 3 | **ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ (CHD)** | | | | | | | | |
| | 1.ಪ್ರದೇಶ ವಿಸ್ತರಣೆ-ಕಸಿ ಕಾಳುಮೆಣಸು | | 400000 | 8.18 | | 400000 | 399960 | 8.18 | 22 |
| | 2.ಜಾಯಿಕಾಯಿ ಮೂರನೇ ವರ್ಷದ ನಿರ್ವಹಣೆ | 6705/ಹೆ | 48276 | 7.2 | | 48276 | 48274 | 7.2 | 21 |
| | 3.ರೈತ ಸಹಾಯಕರ ಸಂಭಾವನೆ | | 90000 | 1 | | 90000 | 90000 | 1 | |
| | 4.ತರಬೇತಿ | | 10000 | 1 | | 10000 | 9991 | 2 | 52 |
| | 5.ಗೇರು ಪ್ರದೇಶ ವಿಸ್ತರಣೆ (50%) | 26050/ಹೆ | 260500 | 10 | | 260500 | 260052 | 10 | 24 |
| | 6. ಗೇರು ತರಬೇತಿ | | 15000 | 1 | | 15000 | 14970 | 1 | 40 |
| | 7.ಸಾದಿಲ್ವಾರು(ಕಾ.ಮೆ.) | | 25000 | | | 25000 | 24631 | | |
| | 7. ಸಾದಿಲ್ವಾರು(ಗೇರು) | | 5000 | | | 5000 | 5000 | | |
| | 8 ಸಿಂ ಖರೀದಿ | | 11000 | | | 11000 | 10992 | | |
| | **ಒಟ್ಟು** | | **864776** | **28.38** | | **864776** | **863870** | **29.38** | **159** |
| 4 | **(ರಾ.ವ)ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟ ಸಮಗ್ರ ನಿಯಂತ್ರಣ** | | | | | | | | |
| | 1. ಪರೋಪಜೀವಿ ಉತ್ಪಾದನೆ | | 60000 | 171429 | | 60000 | 59996 | | |
| | 2. ಮೂಲಭೂತ ಸೌಕರ್ಯ | | 20000 | 1 | | 20000 | 19966 | | |
| | **ಒಟ್ಟೂ** | | **80000** | **171430** | | **80000** | **79962** | | |
| **5** | **ಅಣಬೆ ಬೇಸಾಯ ಅಭಿವೃದ್ಧಿ ಕಾರ್ಯಕ್ರಮ** | | | | | | | | |
| | 1. ರೈತರಿಗೆ ಮತ್ತು ಪಟ್ಟಣವಾಸಿಗಳಿಗೆ ತರಬೇತಿ | | 35000 | 50 | | 35000 | 35000 | 60 | 60 |
| | 2. ಸ್ವಸಹಾಯ ಸಂಘದ ಸದಸ್ಯರಿಗೆ ತರಬೇತಿ | | 35000 | 50 | | 35000 | 35000 | 56 | 56 |
| | 3. ಸಾದಿಲ್ವಾರು | | 2000 | | | 2000 | 2000 | | |
| | **ಒಟ್ಟು** | | **72000** | **100** | | **72000** | **72000** | **116** | **116** |
| **6** | **ಹೈಬ್ರಿಡ ತರಕಾರಿ ಬೀಜದ ಕಿಟ್ ವಿತರಣೆ** | | | | | | | | |
| | 1. ಸಾಮಾನ್ಯ | | 194000 | 97 | | | 194000 | 15 | |
| | 2. ಪ.ಜಾ. | | 100000 | 50 | | | 100000 | 4 | |
| | 3. ಸಾದಿಲ್ವಾರು | | 6000 | | | | 6000 | | |

| | | | | | | | | |
|---|---|---|---|---|---|---|---|---|
| | **ಒಟ್ಟು** | | **300000** | **147** | | | **300000** | **19** | |
| 7 | ಮಧುವನ & ಜೇನುಸಾಕಣೆ : 1. ತರಬೇತಿ | | 7000 | 10 | | 7000 | 7000 | 10 | 10 |
| | 2. ಪೆಟ್ಟಿಗೆ ಮತ್ತು ಕುಟುಂಬ | | 36000 | 20 | | 36000 | 36000 | 14 | 6 |
| | **ಒಟ್ಟೂ** | | **43000** | **30** | | **43000** | **43000** | **24** | **16** |
| 8 | KSHDA ; 1.ಕಾಳುಮೆಣಸು ಸಸ್ಯಾಭಿವೃದ್ಧಿ | 3.805/ಗಿಡ | 38100 | 10000 | | | 38000 | 10000 | |
| | 2. ಅಲಂಕಾರಿಕ ಗಿಡ | | 5390 | 1000 | | | 5387 | 1000 | |
| | 3. ಹೊರಗುತ್ತಿಗೆ ಆಧಾರದ ಮೇಲೆ ತೋಟಗಾರರ ಸೇವೆ | 6750/ಮಾಹೆ | 81000 | 1 | | | 81000 | 1 | |
| | 4.ಸಪೋಟ ಗಿಡ ತೆಗೆಯುವುದು. | | 10800 | 1 | | | 10800 | 1 | |
| | 5.ಕೊಳವೆಬಾವಿ ಮತ್ತು ಪಂಪಸೆಟ ಅಳವಡಿಕೆ | | 300000 | 1 | | | 300000 | 1 | |
| | **ಒಟ್ಟು** | | **435290** | **11003** | | | **435187** | **11003** | |
| 9 | ಹನಿ ನೀರಾವರಿ (ಜಿಲ್ಲಾ ವಲಯ-D02) | | 50000 | 1 | | 50000 | 49509 | 1 | 1 |
| 10 | ತೋಟಗಾರಿಕೆ ಕಟ್ಟಡ (ಜಿಲ್ಲಾ ವಲಯ) | | 150000 | 1 | | 150000 | 150000 | 1 | 1 |
| 11 | ತೆಂಗು ಬೀಜ ಸಂಗ್ರಹಣೆ | | | | | | | | |
| | 1. ಬೀಜ ಸಂಗ್ರಹಣೆ | | 42000 | 3000 | | 42000 | 46080 | 1600 | |
| | 2. ಸಾಗಾಣಿಕೆ ಮತ್ತು ಬಿತ್ತನೆ | | 11600 | | | 11600 | 7513 | | |
| | 3. ನರ್ಸರಿ ನಿರ್ವಹಣೆ | | 6400 | 2950 | | 6400 | 5819 | 2950 | |
| | **ಒಟ್ಟೂ** | | **60000** | **5950** | | **60000** | **59412** | **4550** | |
| 12 | ಕ್ಷೇತ್ರ ನಿರ್ವಹಣೆ | | **40000** | **1** | | **40000** | **39940** | 1 | |
| 13 | ಪ್ರಚಾರ ಮತ್ತು ಸಾಹಿತ್ಯ | | **10000** | **1** | | **10000** | **9999** | 1 | |
| 14 | ಜೇನು ಸಾಕಾಣಿಕೆ | | | | | | | | |
| | 1. ಪೆಟ್ಟಿಗೆ ಮತ್ತು ಕುಟುಂಬ ಖರೀದಿ | | 38000 | 21 | - | 38000 | 37800 | 21 | 6 |
| | 2. ತರಬೇತಿ | | 5600 | 1 | - | 5600 | 5600 | 1 | 7 |
| | **ಒಟ್ಟೂ** | | **43600** | **22** | | **43600** | **43400** | **1** | **13** |
| | 1ರೈತರಿಗೆ ಸಹಾಯ (ತಾಪಂ)ಸಾಮಾನ್ಯ (100) | 2000/ಹೆ. | 40000 | 20 | | 39000 | 39000 | 20 | 41 |
| | 2.ರೈತರಿಗೆ ಸಹಾಯ (ತಾಪಂ) ಪರಿಶಿಷ್ಟ ಜಾತಿ (422) | 2000/ಹೆ. | 5000 | 2.5 | | 5000 | 4650 | 2.5 | 4 |
| | **ಒಟ್ಟೂ** | | **45000** | **22.5** | | **44000** | **43650** | **22.5** | **45** |
| 15 | ರೈತರಿಗೆ ತರಬೇತಿ (015) | 400/- | 28000 | 70 | | **28000** | **28000** | **70** | **70** |
| 16 | ವಿಶೇಷ ಘಟಕ ಯೋಜನೆ | | | | | - | | | |
| | 1. 2016-17 ನೇ ಸಾಲಿನ ನಿರ್ವಹಣೆ | | 7450 | 2 | | 7450 | 7450 | 2 | 2 |
| | 2. ಹೊಸ ತೋಟ ಸ್ಥಾಪನೆ | | 10800 | 1 | | 10800 | 10800 | 1 | 1 |
| | 3. 2-ತೆಂಗಿನ ಸಸಿ ವಿತರಣೆ | | 750 | 7 | | 750 | 750 | 7 | 7 |
| | **ಒಟ್ಟೂ** | | **19000** | **10** | | **19000** | **19000** | **10** | **10** |
| 17 | CHD ಹೊಂದಾಣಿಕೆ ವೆಚ್ಚ (422) | | | | | | | | |
| | 1) ರಾ.ತೋ.ಮಿ. ಯೋಜನೆ. ಕಾಳುಮೆಣಸು ಪ್ರ.ವಿ. | | 25000 | | | 25000 | 25000 | 1 | |
| | 1) ರಾ.ತೋ.ಮಿ. ಯೋಜನೆ. ಗೇರು-II | | 1000 | | | 1000 | 1000 | 0.2 | |
| | 2) ರಾ.ತೋ.ಮಿ. ಯೋಜನೆ. ಗೇರು-III | | 1000 | | | 1000 | 1000 | 0.2 | |
| | 3) ರಾ.ತೋ.ಮಿ. ಯೋಜನೆ. ಜೇನುಕಾಲೋನಿ | | 20000 | | | 19000 | 19000 | 21 | |

| | | | | | | | | | |
|---|---|---|---|---|---|---|---|---|---|
| 4) ರಾ.ತೋ.ಮಿ. ಯೋಜನೆ. ಜೇನುಪೆಟ್ಟಿಗೆ | | 20000 | | | 19000 | 19000 | 21 | | |
| 5) ರಾ.ತೋ.ಮಿ. ಯೋಜನೆ. ಜೇನುಯಂತ್ರ. | | 20000 | | | 18000 | 18000 | 6 | | - |
| ಒಟ್ಟೂ | | **87000** | | | **83000** | **83000** | | | |

ಇಲಾಖೆಯಿಂದ ಅಥೋರೈಸೇಶನ್ ಮಂಜೂರಾದ ಅಥವಾ ಪರವಾನಿಗೆ ನೀಡಲಾದ ಮತ್ತು ಕಡಿಮೆ ದರದಲ್ಲಿ ಸವಲತ್ತುಗಳನ್ನು ಪಡೆಯಲಾದ ರೆಸಿಪಿಯೆಂಟ್‌ಗಳ ವಿವರಗಳು

ಹೊನ್ನಾವರ ತಾಲೂಕಿಗೆ ಮಂಜೂರಾದ ಇಲಾಖೆಯ ವಿವಿಧ ಯೋಜನೆಗಳ ಅಡಿಯಲ್ಲಿ ಉಚಿತವಾಗಿ/ಕಡಿಮೆ ದರದಲ್ಲಿ ಸವಲತ್ತುಗಳನ್ನು ಪಡೆಯಲಾದ ಫಲಾನುಭವಿಗಳ ವಿವರಗಳನ್ನು ಯೋಜನೆವಾರು ಪ್ರತ್ಯೇಕ ವಹಿಗಳಲ್ಲಿ ನಿರ್ವಹಿಸಲಾಗಿದೆ. ಆಯಾ ವರ್ಷದ ಅಂತ್ಯಕ್ಕೆ ಸದರಿ ಫಲಾನುಭವಿಗಳ ಪಟ್ಟಿಯ ಪ್ರತಿಗಳನ್ನು ಮೇಲಧಿಕಾರಿಗಳಿಗೆ ಹಾಗೂ ಕಛೇರಿ ನೋಟೀಸ ಬೋರ್ಡಿನಲ್ಲಿ ಪ್ರಕಟಿಸಲಾಗಿದೆ.

ಕುಗ್ಗಿಸಲಾದ ಎಲೆಕ್ಟ್ರಾನಿಕ್ ಮಾದರಿಯಲ್ಲಿಲಭ್ಯವಿರುವ ಮಾಹಿತಿ ವಿವರ ದೊರಕುವಂತೆ ಅಥವಾ ಮಾಹಿತಿ ಇಟ್ಟುಕೊಂಡಿರುವಿಕೆ.

ಸಧ್ಯಕ್ಕೆ ಯಾವುದೇ ರೀತಿಯ ಎಲೆಕ್ಟ್ರಾನಿಕ್ ಮಾಹಿತಿಗಳು ಲಭ್ಯವಿರುವುದಿಲ್ಲ.

ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಣ್ಯವಿರುವ ಅವಕಾಶ ವಿಚಾರಗಳಲು ಗ್ರಂಥಾಲಯ ಅಥವಾ ಓದುವ ಕೊಠಡಿಗಳನ್ನು ಒಳಗೊಂಡು ಸಾರ್ವಜನಿಕ ಉಪಯೋಗಕ್ಕಾಗಿ ತೆರೆದಿದ್ದರೆ :

ಸಧ್ಯಕ್ಕೆ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ ಇರುವುದಿಲ್ಲ.

ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು, ಪದನಾಮ ಮತ್ತು ಇತರೆ ವಿಷಯಗಳು.

ಶ್ರೀ ಕೆ.ಪಿ ಚಿದಂಬರ
(ಪ್ರಭಾರ) ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
(ಜಿಪಂ ) ಕುಮಟಾ
ದೂರವಾಣೀ ಸಂಖ್ಯೆ: 08386 223856

ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು, ಪದನಾಮ

ಶ್ರೀ ಹೆಚ್.ಎಲ್ ಪಟಗಾರ
ಸಹಾಯಕ ತೋಟಗಾರಿಕೆ ಅಧಿಕಾರಿ

ಮೇಲ್ಮನವಿ ಪ್ರಾಧಿಕಾರ:

ಶ್ರೀ ಶಶಿಕಾಂತ ಕೋಟಿಮನೆ
ತೋಟಗಾರಿಕೆ ಉಪನಿರ್ದೇಶಕರು,
ಜಿಲ್ಲಾ ಪಂಚಾಯತ್, ಶಿರಸಿ, ಉತ್ತರಕನ್ನಡ.
ದೂರವಾಣಿ ಸಂಖ್ಯೆ: 08384 226427

********* @ ********* @ ********* @ ********* @ *******

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
(ಜಿಪಂ )ಕುಮಟಾ